**O.S. 32-21 PW : 1**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 11.03.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ P H K, ವಕೀಲರಿಂದಃ**

5. 1991 ರಲ್ಲಿ ನಮ್ಮ ತಂದೆ ಮರಣ ಹೊಂದಿದ ನಂತರ ಮನೆಯಲ್ಲಿ ಏನು ವ್ಯವಹಾರವಾಗುತ್ತದೆ ಅಂತಾ ಸಂಪೂರ್ಣ ಮಾಹಿತಿ ಇದೆ. ನಾನು ಗಂಡನ ಮನೆಯಲ್ಲಿರುವುದರಿಂದ ಮನೆ ವ್ಯವಹಾರದ ಬಗ್ಗೆ ಗೊತ್ತಿಲ್ಲ. 1991 ರ ನಂತರ ದಾವೆ ಸಲ್ಲಿಸುವ ಪೂರ್ವದಲ್ಲಿ ಮನೆತನಕ್ಕೆ ಸಂಬಂಧಪಟ್ಟ ದಾಖಲಾತಿಗಳನ್ನು ತೆಗೆದು ನೋಡಿಲ್ಲ. ತೆಗೆಸಿ ನೋಡಲು ತೊಂದರೆ ಇಲ್ಲ, ನಾವು ಗುಂಡು ಮಕ್ಕಳಲ್ಲ. 1991 ರಲ್ಲಿ ನಮ್ಮ ಮರಣ ಹೊಂದಿದ ನಂತರ ತವರು ಮನೆಗೆ ನಾನು ದಾವೆ ಸಲ್ಲಿಸುವ ಪೂರ್ವದಲ್ಲಿ ಹೋಗಿ ಬಂದಿರುತ್ತೇನೆ. 1991 ರಲ್ಲಿ ನಮ್ಮ ತಂದೆ ಮರಣ ಹೊಂದಿದ ನಂತರ ದಾವೆ ಸಲ್ಲಿಸುವ ಪೂರ್ವದಲ್ಲಿ ನಾನು ಹಾಗೂ ಒಂದನೇ ಪ್ರತಿವಾದಿ ಚೆನ್ನಾಗಿದ್ದೆವು. 1991 ರಿಂದ ದಾವಾ ಸಲ್ಲಿಸುವ ಪೂರ್ವದಲ್ಲಿ ನಾನು ತವರು ಮನೆಗೆ ಹೋದಾಗ ಮನೆತನಕ್ಕೆ ಸಂಬಂಧಪಟ್ಟಂತೆ ವ್ಯವಹಾರದ ಬಗ್ಗೆ ಒಂದನೇ ಪ್ರತಿವಾದಿ ಜೊತೆ ನಾನು ಮಾತನಾಡಿಲ್ಲ. 1991 ರಿಂದ ದಾವೆ ಸಲ್ಲಿಸೂ ಪೂರ್ವದಲ್ಲಿ ನಮ್ಮ ಮನೆತನಕ್ಕೆ ಸಂಬಂಧಪಟ್ಟ ವ್ಯವಹಾರದ ಬಗ್ಗೆ ಚರ್ಚೆ ಮಾಡಿದ್ದೀರಾ ಎಂಬ ವಕೀಲರ ಪ್ರಶ್ನೆಗೆ ಅದರ ಅವಶ್ಯಕತೆ ಇಲ್ಲವೆಂದು ಹೇಳುತ್ತಾರೆ. ನಿಪಿ.30 ರಿಂದ 34 ರಲ್ಲಿರುವ ಆಸ್ತಿಗಳನ್ನು ದಿಃ 19.11.2010 ರಂದು ಒಂದನೇ ಪ್ರತಿವಾದಿ ಮಾರಾಟ ಮಾಡಿದ ವಿಷಯದ ಬಗ್ಗೆ ಚರ್ಚಿಸಿದ್ದೀರಾ ಅಂದರೆ ಗೊತ್ತಿಲ್ಲ. ಸದರಿ ಆಸ್ತಿಗಳು ಯಾರ ಯಾರ ಕಬ್ಜೆಯಲ್ಲಿವೆ ಎಂದು ನಾನು ವಿಚಾರಣೆ ಮಾಡಿಲ್ಲ. ನಾನು ಕೇಸ್ ಹಾಕಲು ದಾಖಲೆ ತೆಗೆಸುವಾಗ ಈ ವಿಷಯ ಗೊತ್ತಾಯಿತು. ದಾಖಲೆ ತೆಗೆಸಿದ ನಂತರ ನಾನು ಒಂದನೇ ಪ್ರತಿವಾದಿಗೆ ದಾವಾ ಆಸ್ತಿಗಳನ್ನು ಮಾರಾಟ ಮಾಡಿದ ಬಗ್ಗೆ ಜಗಳ ಇದ್ದಿದ್ದರಿಂದ ಕೇಳಿಲ್ಲ. ದಿಃ 11.11.2020 ರಂದು ನನ್ನ ಮಗಳು 39 ವರ್ಷದ ಮಗಳು ಮರಣ ಹೊಂದಿದಾಗ ಒಂದನೇ ಪ್ರತಿವಾದಿ ಅವಾಚ್ಯ ಶಬ್ಧಗಳಿಂದ ಬೈದಿದ್ದರಿಂದ ಜಗಳವಾಯಿತು. ಈ ವಿಷಯವನ್ನು ಈ ದಾವೆಯಲ್ಲಿ ಬರೆಸಿದ್ದೀರಾ ಎಂಬ ವಕೀಲರ ಪ್ರಶ್ನೆಗೆ ನಮ್ಮ ವಕೀಲರು ಕೇಳಿಲ್ಲ, ನಾನು ಬರೆಸಿಲ್ಲ. ಕೇಸ್ ಹಾಕಲು ಸಂಪೂರ್ಣ ಮಾಹಿತಿ ನಾನೇ ನೀಡಿದ್ದೇನೆ.

**O.S. 32-21** **PW : 1**

6. ದಿಃ 11.11.2020 ರಂದು ಜಗಳವಾದ ನಂತರ ನಾನು ಒಂದನೇ ಪ್ರತಿವಾದಿಗೆ ದಾವಾ ಆಸ್ತಿಯಲ್ಲಿ ಹಿಸ್ಸಾ ಕೊಡುವಂತೆ ಕೇಳಿದ್ದೀರಾ ಎಂಬ ಪ್ರಶ್ನೆಗೆ ನನಗೆ ಅದರ ಅವಶ್ಯಕತೆ ಇಲ್ಲ, ವಕೀಲರು ಕೊಡಿಸುತ್ತಾರೆ. ದಿಃ 28.11.2020 ರಂದು ಜಗಳ ಮಾಡಿದ್ದಕ್ಕೆ ನನ್ನ ಗಂಡ ಹೊಟ್ಟಬೇನಿ ಮಾಡಿಕೊಂಡು ಮರಣ ಹೊಂದಿದ್ದಾನೆ. ಒಂದನೇ ಪ್ರತಿವಾದಿ ದಿಃ 28.11.2020 ರಂದು ಜಗಳ ಮಾಡಿದ ನಂತರ ನನ್ನ ಗಂಡ ಹೊಟ್ಟಬೇನಿಯಿಂದ ಎಷ್ಟು ದಿನಗಳ ನಂತರ ಮರಣ ಹೊಂದಿದ್ದಾನೆ ಎಂಬ ವಕೀಲರ ಪ್ರಶ್ನೆಗೆ ಸಾಕ್ಷಿಯೂ ಉತ್ತರಿಸುತ್ತಾಳೆ ದಿಃ 19.09.2023 ರಂದು ಮರಣ ಹೊಂದಿರುತ್ತಾನೆಂದು ಹೇಳುತ್ತಾಳೆ. ದಿಃ 28.11.2020 ರಿಂದ ನನ್ನ ಗಂಡ ಹೊಟ್ಟಬೇನಿಯಿಂದ ಬಳಲುತ್ತಿದ್ದ ಎಂಬ ಬಗ್ಗೆ ಆಸ್ಪತ್ರೆಯಲ್ಲಿ ತೋರಿಸಿದ ಬಗ್ಗೆ ದಾವೆಯಲ್ಲಿ ಬರೆಸಿಲ್ಲ. ಅದಕ್ಕೆ ಸಂಬಂಧಪಟ್ಟ ದಾಖಲೆ ಹಾಜರಪಡಿಸಿದ್ದೀರಾ ಎಂಬ ಪ್ರಶ್ನೆಗೆ ಮುಂದಿನ ಮುದ್ದತ್ ಗೆ ಹಾಜರಪಡಿಸುತ್ತೇನೆ ಎಂದು ಉತ್ತರಿಸುತ್ತಾಳೆ. ನನ್ನ ಗಂಡ ಹೊಟ್ಟಬೇನಿಯಿಂದ ಮರಣ ಹೊಂದಿದ್ದಾನೆ ಬೇರೆ ಕಾಯಿಲೆಯಿಂದ ಮರಣ ಹೊಂದಿದ್ದಾನೆ ಅಂದರೆ ಸರಿಯಲ್ಲ. ಒಂದನೇ ಪ್ರತಿವಾದಿ ನಮ್ಮ ಮನೆಗೆ ಬಂದು ಜಗಳ ಮಾಡಿರುತ್ತಾನೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನನ್ನ ಗಂಡ ಸಾಯುವದಕ್ಕಿಂತ 3 ವರ್ಷ ಮುಂಚೆ ಕ್ಯಾನ್ಸರ ಕಾಯಿಲೆಯಿಂದ ಬಳಲತ್ತಿದ್ದನು. ಆ ದಾಖಲೆ ನಿಮ್ಮ ಬಳಿ ಇವೆ ಅಂದರೆ ದಾಖಲೆ ನೋಡಿ ಮುಂದೆ ಹೇಳುತ್ತೇನೆ ಎಂದು ಹೇಳುತ್ತಾಳೆ. ನನ್ನ ಗಂಡ ಸಾಯುವದಕ್ಕಿಂತ ಮುಂಚೆ ಒಂದು ವರ್ಷದಿಂದ ಕ್ಯಾನ್ಸರ ಕಾಯಿಲೆಯಿಂದ ಬಳಲುತ್ತಿದ್ದನು. ದಿಃ 28.11.2020 ರ ನಂತರ ನನ್ನ ಗಂಡ ಹೊಟ್ಟಬೇನಿಯಿಂದ ಬಳಲುವ ಬಗ್ಗೆ ವಿವೇಕಾನಂದ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿದ್ದೇನೆ. ಆ ದಾಖಲೆಗಳನ್ನು ತಂದು ಹಾಜರಪಡಿಸುತ್ತೇನೆ. ಹೊಟ್ಟಬೇನಿ ಹಾಗೂ ಮಾನಸಿಕ ಕಾಯಿಲೆ ಬಗ್ಗೆ ತೋರಿಸಿಲ್ಲ ಹಾಗೂ ದಾಖಲೆಗಳು ಇಲ್ಲ ಅಂದರೆ ಸರಿಯಲ್ಲ. ಒಂದನೇ ಪ್ರತಿವಾದಿ ನನ್ನ ಜೊತೆ ಯಾವುದೇ ಜಗಳ ಮಾಡದಿದ್ದರೂ ಸಹ ನಾನು ಆತನ ವಿರುದ್ಧ ಸುಳ್ಳು ಆಪಾದನೆ ಮಾಡುತ್ತಿದ್ದೇನೆ ಅಂದರೆ ಸರಿಯಲ್ಲ.

**O.S. 32-21** **PW : 1**

7. ನನ್ನ ತವರು ಮನೆಗೆ ಹಿಂದಿನಿಂದ ಇಲ್ಲಿಯವರೆಗೂ ಹಣ ಕೊಟ್ಟು ನೋಡಿದ್ದೇನೆ. ಈ ವಿಷಯ ದಾವೆಯಲ್ಲಿ ಕಾಣಿಸಿದ್ದೀರಾ ಎಂಬ ಪ್ರಶ್ನೆಗೆ ಅದರ ಅವಶ್ಯಕತೆ ಇಲ್ಲವೆಂದು ಹೇಳುತ್ತಾರೆ. ಒಂದನೇ ಪ್ರತಿವಾದಿಗೆ ಹಣಕಾಸಿನ ತೊಂದರೆಯಾದಾಗ ಅವರು ನಮ್ಮ ಬಳಿ ಬಂದಾಗ ನಾನು ಅವರಿಗೆ ಹಣ ಕೊಟ್ಟಿದ್ದೇನೆ ಅಂದರೆ ಸರಿ.

**ಮುಂದಿನ ಪಾಟೀ ಸವಾಲಿಗೆ ಪ್ರಕರಣವು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.